ವಿಷಯ :– ಕ.ರಾ.ರ.ಸಾ. ಸಂಸ್ಥೆಯ ಬಸ್ಸುಗಳಿಂದ ಉಂಟಾದ ಅಪಘಾತಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 734 (1136)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದಿನ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಿಂದ ಉಂಟಾದ ಅಪಘಾತಗಳೆಷ್ಟು ? (1988–89, 1989–90, 1990–91 ಇಲ್ಲಿಯವರೆಗೆ)

ಆ) ಈ ಅಪಘಾತಗಳಿಂದ ಸಾರಿಗೆ ಸಂಸ್ಥೆಗೆ ಉಂಟಾದ ನಷ್ಟವೆಷ್ಟು ?

ಇ) ಈ ಅಪಘಾತಗಳಲ್ಲಿ ಮಡಿದವರ ಸಂಖ್ಯೆ ಮತ್ತು ಅವರಿಗೆ ಸರ್ಕಾರದಿಂದ ಪರಿಹಾರ ನೀಡಿದ ಮೊತ್ತ ? (ಬೆಂಗಳೂರಿನಿಂದ ಮೈಸೂರುವರೆಗಿನ ಮಾಹಿತಿಯನ್ನು ನೀಡುವುದು)

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :–

ಅ) 1988–89 ರಲ್ಲಿ 2,251
1989–90 ರಲ್ಲಿ 2,386
1990–91 ರಲ್ಲಿ 1,418
(ನವೆಂಬರ್ 1990ರವರೆವಿಗೆ) ———
6,055

ಆ) ರೂ. 10,47,93,575–72 ಪೈಸೆ

ಇ) ಬೆಂಗಳೂರು ಮೈಸೂರು ಮಾರ್ಗದಲ್ಲಿ ಸತ್ತವರ ಸಂಖ್ಯೆ 45.
ಪರಿಹಾರ ಧನ ಕೊಟ್ಟ ಬಗ್ಗೆ ಸದ್ಯದಲ್ಲಿ ಮಾಹಿತಿಯು ಲಭ್ಯವಿಲ್ಲ.

ಅಧ್ಯಕ್ಷರು :– ಮಂಡಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು.

ಶ್ರೀ ಡಿ. ಹಲಗೇಗೌಡ :– ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಹೋಬಳಿ ಬಿಲ್ಲೇನಹಳ್ಳಿಯಲ್ಲಿ ಕೆರೆಯ ನಿರ್ಮಾಣ ಕಾರ್ಯ ಪ್ರಾರಂಭವಾಗದಿರುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು :– ಅರ್ಜಿಯನ್ನೊಪ್ಪಿಸಲಾಯಿತು. ಈಗ ಗಮನ ಸೆಳೆಯುವ ಸೂಚನೆಗಳು.....

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ಮುಂಚೆ ಗುಲಬರ್ಗ ಜಿಲ್ಲೆಯ ಶಹಪೂರ ತಾಲ್ಲೂಕಿನ ಗೋಗಿ ಎಂಬಲ್ಲಿ ಗಲಾಟೆಯಾದ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು :– ನಮೂದಿತ ಗಮನಸೆಳೆಯುವ ಸೂಚನೆಯನ್ನು ನಾಳೆ ತೆಗೆದುಕೊಳ್ಳೋಣ.....

(ಶ್ರೀ ವಾಟಾಳ್ ನಾಗರಾಜ್, ಶ್ರೀ ಶಿವಾನಂದ ಕೌಜಲಗಿ, ಶ್ರೀ ಪಿ. ಜಿ. ಆರ್. ಸಿಂಧ್ಯ ಮತ್ತಿತರ ಮಾನ್ಯ ಸದಸ್ಯರುಗಳು ಗುಲ್ಬರ್ಗ ಜಿಲ್ಲೆಯ ಶಹಪೂರ ತಾಲ್ಲೂಕಿನ ಗೋಗಿ ಎಂಬಲ್ಲಿ ನಡೆದ ಗೋಲಿಬಾರ್ ಪ್ರಕರಣದ ಬಗ್ಗೆ ಮಾತನಾಡಲು ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡರು.)

ಅಧ್ಯಕ್ಷರು :– ದಯಮಾಡಿ ತಾವುಗಳು ಒಬ್ಬೊಬ್ಬರಾಗಿ ಸಮಾಧಾನದಿಂದ ಹೇಳಿ ಈಗ ಮಾನ್ಯ ಕಮಾಲುಲ್ ಇಸ್ಲಾಮ್‌ರವರು ಮಾತನಾಡಲಿ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ :– ಶಹಪೂರ ತಾಲ್ಲೂಕಿನ ಗೋಗಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ.

Sri Qumarul Islam : Yesterday in the Gogi town of Shahapur Taluka, in Gulbarga Dt. there was a firing and one person was killed. It is reported in Deccan Herald that it is due to some political rivalry.